**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.1088/2025.**

ಪಿರ್ಯಾದುದಾರರುಃ– ಸಿಂಧ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
ಮಂಕಿ, ತಾಲೂಕುಃ ಹೊನ್ನಾವರ.
ಪ್ರತಿನಿಧಿಸುವವರು,
ಶ್ರೀ ಗಣಪತಿ ನಾಯ್ಕ,
ವೃತ್ತಿಃ– ಮ್ಯಾನೇಜರ.

**–ವಿರುದ್ಧ–**

ಆರೋಪಿಯ ಹೆಸರುಃ– ಸಂತೋಷ ಶ್ರೀಧರ ನಾಯ್ಕ,
ಸಾಕೀನಃ– ಅರ್ಲೆ,
ಪೋಸ್ಟಃ ಅನಂತವಾಡಿ,
ತಾಲೂಕುಃ– ಹೊನ್ನಾವರ, (ಉ.ಕ.).

**ಆಪಾದನೆ**

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಆರೋಪಿಯಾದ ನೀವು ಪಿರ್ಯಾದಿಯವರ ಸಂಸ್ಥೆಯಲ್ಲಿ ದಿನಾಂಕಃ 27–04–2023 ರಂದು ಸಾಲದ ಖಾತೆ ಸಂಖ್ಯೆ 3200332 ರಡಿಯಲ್ಲಿ ಜಾಮೀನು ಸಾಲವನ್ನು ಪಡೆದಿದ್ದು ಇರುತ್ತದೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕೆನರಾ ಬ್ಯಾಂಕ್., ಮಂಕಿ** ಶಾಖೆಯ ಚೆಕ್ ನಂ.240436 ನ್ನು ದಿನಾಂಕ 13–02–2025 ರಂದು ರೂ. 2,00,424/– ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಡಿಸಿಸಿ ಬ್ಯಾಂಕ್., ಮಂಕಿ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, 'Funds Insufficient' ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 17–02–2025 ರಂದು ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು

ನಿಮಗೆ ವಕೀಲರ ಮೂಲಕ ದಿನಾಂಕ 13-03-2025 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ಆರೋಪಿಯಾದ ನಿಮಗೆ ದಿನಾಂಕ 20-03-2025 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು

ಪ್ರಶ್ನೆ 2: ಷದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕಃ- 22-09-2025.**

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಯವರ ನ್ಯಾಯಾಲಯ.,ಹೊನ್ನಾವರ.**

ಆರೋಪಿಯ ಸಹಿಃ- ಸಹಿ ಇದೆ.

****